ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ ಸಾವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-01

ಸಂಖ್ಯೆತ(1)ಮೈ.ಬೆಂ.ವಿ.ಕ.ತ.ಮಾ.ಬಗ್ಗೆ01/2021-22 ದಿನಾಂಕ: 18.12.2021

## ಸುತ್ತೋಲೆ

ವಿಷಯ:ಬೆಂಗಳೂರು ಮತ್ತು ಮೈಸೂರು ವಿಭಾಗದ ವಿವಿಧ ಕಛೇರಿಗಳ 2020-21 ನೇ ಅವಧಿಯ ತಪಾಸಣೆ/ಮಾರ್ಗದರ್ಶನ ಮಾಡುವ ಬಗ್ಗೆ,

ಉಲ್ಲೇಖ: 1) ಈ ಕಛೇರಿ ಸುತ್ತೋಲೆ ಪತ್ರದ ಸಂಖ್ಯೆ; ತ(1) ಬೆಂ.ಮೈ.ವಿ.ಕಛೇ.ತಪಾ .ಹಂಚಿ 01/2021-22 ದಿನಾಂಕ 13-07-2021,

2) ಕಾರ್ಯದರ್ಶಿಗಳು, ಕ.ಪ್ರೌ.ಶಿ .ಪ ಮಂ, ವಿಭಾಗೀಯ ಕಛೇರಿ ಬೆಳಗಾವಿ ರವರ ಮನವಿ ಪತ್ರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಟಿ.ನರಸೀಪುರ, ಗುಂಡ್ಲುಪೇಟೆ, ಕೆ ಆರ್ ನಗರ , ಮಂಗಳೂರು ಉತ್ತರ ಇವರುಗಳ ಮನವಿಪತ್ರಗಳು,

@@@@@@@@

ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಮೈಸೂರು ವಿಭಾಗದ ಕಛೇರಿಗಳ ವಾರ್ಷಿಕ ತಪಾಸಣೆ ನಡೆಸಲು ಉಲ್ಲೇಖ-01 ರ ಸುತ್ತೋಲೆಯಲ್ಲಿ,ತಿಳಿಯಪಡಿಸಲಾಗಿತ್ತು, ಅದರಂತೆ ಸದರಿ ಕಛೇರಿಗಳ ತಪಾಸಣೆ ಮಾಡಿ ವರದಿಗಳನ್ನು ಈ ಕಛೇರಿಗೆ ಸಲ್ಲಿಸುತ್ತಿರುವುದನ್ನು ಗಮನಿಸಲಾಗಿದೆ, ಉಲ್ಲೇಖ-2 ರ ಪತ್ರದಲ್ಲಿ ಕೆಲವು ಕಛೇರಿ ಮುಖ್ಯಸ್ಥರುಗಳು 2019-20 ನೇ ಸಾಲಿನ ತಪಾಸಣೆ ನಡೆಸುವಾಗ 2020-21 ನೇ ಸಾಲಿನ ತಪಾಸಣೆಯನ್ನು ಮಾಡಿರುತ್ತಾರೆಂದು ತಿಳಿಸಿ ಪ್ರಸ್ತುತ 2020-21 ನೇ ಅವಧಿಯ ತಪಾಸಣೆ ನಡೆಸುವ ಅಧಿಕಾರಿಗಳು ತಪಾಸಣೆ ಮಾಡುವ ಸಂಬಂಧ ಸೂಕ್ತ ಮಾರ್ಗದರ್ಶನ ಕೋರಿರುತ್ತಾರೆ, ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮನವಿ ಸಲ್ಲಿಸಿ ತಪಾಸಣೆಯನ್ನು ಮಾಡದಿರಲು ಕೋರಿರುತ್ತಾರೆ,

ಈ ಹಿನ್ನಲೆಯಲ್ಲಿ 2019-20 ನೇ ಸಾಲಿನ ತಪಾಸಣಾ ನಡೆಸುವಾಗ 2020-21 ನೇ ಅವಧಿಯ ತಪಾಸಣೆಯನ್ನು ಹಮ್ಮಿಕೊಂಡಿದ್ದಲ್ಲಿ ಸದರಿ ಕಛೇರಿಯ ಹಿಂದಿನ ಸಾಲಿನ ತಪಾಸಣಾ ವರದಿಯನ್ನು ಪರಿಶೀಲಿಸಿ 06 ತಿಂಗಳುಗಿಂತ ಕಡಿಮೆ ಅವಧಿ ಇದ್ದಲ್ಲಿ ಸದರಿ ಕಛೇರಿಯ ತಪಾಸಣೆಯನ್ನು ಹಮ್ಮಿಕೊಳ್ಳದಿರಲು ಉಲ್ಲೇಖಿತ-01 ರ ಪತ್ರದಲ್ಲಿ ಸೂಚಿರುವ ಎಲ್ಲಾ ಕಛೇರಿಯ ಮುಖ್ಯಸ್ಥರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ,

21.12.21

ಸಹ ನಿರ್ದೇಶಕರು (ಶಾಲಾ ಶಿಕ್ಷಣ)
ಆಯುಕ್ತರ ಕಛೇರಿ (ಸಾ.ಶಿ.ಇ)
ಬೆಂಗಳೂರು

ಪ್ರತಿಯನ್ನು :

1) ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ನಿರ್ದೇಶಕರುಗಳಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ,
2) ಆಯುಕ್ತರ ಕಛೇರಿಯ ಎಲ್ಲಾ ನಿರ್ದೇಶಕರು ( ಪ್ರಾಥಮಿಕ, ಪ್ರೌಢ, ಅಲ್ಪಸಂಖ್ಯಾತ) ಸಹ ನಿರ್ದೇಶಕರು (ಶಾಲಾ ಶಿಕ್ಷಣ,) ಉಪನಿರ್ದೇಶಕರು ( ಪ್ರಾಥಮಿಕ, ಪ್ರೌಢ, ಅಲ್ಪಸಂಖ್ಯಾತ) ರವರ ಮಾಹಿತಿಗಾಗಿ.
3) ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಸಹ ನಿರ್ದೇಶಕರು ಹಾಗೂ ಸಿಟಿಇ ಪ್ರಾಂಶುಪಾಲರುಗಳ ಮಾಹಿತಿಗಾಗಿ ಸಲ್ಲಿಸಿದೆ,
4) ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮಾಹಿತಿಗಾಗಿ,
5) ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಪ್ರಾಂಶುಪಾಲರುಗಳ ಮಾಹಿತಿಗಾಗಿ,
6) ಕಛೇರಿ ಪ್ರತಿ,

21.11.21